# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 42 ಫ್ರಾ.ಸಾ. : 19**

ಸಾಕ್ಷಿಯ ಹೆಸರು : ಅನುರಂಜನಿ ಎಲ್ ಎಂ.

ಗಂಡನ ಹೆಸರು : ಸುರೇಶ

ವಯಸ್ಸು : 43 ವರ್ಷ

ಕೆಲಸ : ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್,
ಕೆ.ಪಿ.ಟಿ.ಸಿ.ಎಲ್., ಕಾರ್ಕಳ

ವಾಸ : ಕಾರ್ಕಳ

**ದಿನಾಂಕಃ 17-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. 2009 ರಿಂದ 2017 ರ ವರೆಗೆ ನಾನು 33/11 ಕೆ.ವಿ., ಉಪ ಕೇಂದ್ರ, ಹೆಸ್ಕಾಂ, ಕದ್ರಾದಲ್ಲಿ ಕಿರಿಯ ಅಭಿಯಂತರಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 01-04-2014 ರಂದು ಕದ್ರಾ ವೃತ್ತ ನಿರೀಕ್ಷಕರಿಂದ ಕೋರಿಕೆ ಪತ್ರ ಬಂದಿದ್ದು, ಅದರಲ್ಲಿ ದಿಃ 14-02-2014 ರಂದು ಕದ್ರಾದ ರಾಜೀವ ನಗರದಲ್ಲಿ ಸಾಯಂಕಾಲದಿಂದ ರಾತ್ರಿ 11-00 ಗಂಟೆಯ ವರೆಗೆ ವಿದ್ಯುತ್ ಪೂರೈಕೆ ಇದ್ದ ಬಗ್ಗೆ ಮಾಹಿತಿ ನೀಡುವಂತೆ ಕೋರಿದ್ದು, ಅದರಂತೆ ನಾನು ಅದೇ ದಿನ ನಮ್ಮ ಕಚೇರಿಯಲ್ಲಿನ ದಿಃ 14-02-2014 ರ ಲಾಗ್ ರಿಜಿಸ್ಟರ್ ನ್ನು ಪರಿಶೀಲಿಸಿ, ದಿಃ 14-02-2014 ರಂದು ಸಾಯಂಕಾಲದಿಂದ ರಾತ್ರಿ 11-00 ಗಂಟೆಯ ವರೆಗೆ ರಾಜೀವ ನಗರಕ್ಕೆ ವಿದ್ಯುತ್ ಪೂರೈಕೆ ಇತ್ತು ಎಂದು ಮಾಹಿತಿಯನ್ನು ಪತ್ರದ ಮೂಲಕ ನೀಡಿರುತ್ತೇನೆ. ಸಾಕ್ಷಿಯು ತಮಗೆ ಬಂದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-50 ಎಂದು, ಸಾಕ್ಷಿಯ ಸಹಿಯನ್ನು ನಿಪಿ-50(ಎ) ಎಂದು, ಸಾಕ್ಷಿಯು ನೀಡಿದ ಮಾಹಿತಿ ಪತ್ರವನ್ನು ನಿಪಿ-51 ಎಂದು, ಸಾಕ್ಷಿಯ ಸಹಿಯನ್ನು ನಿಪಿ-51(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ.ವಕೀಲರಿಂದ**

2. ನಮ್ಮ ಕಚೇರಿಯಲ್ಲಿ ಬೇರೆ-ಬೇರೆ ಏರಿಯಾಗಳಿಗೆ, ಬೇರೆ-ಬೇರೆ ಲಾಗ್ ರಿಜಿಸ್ಟರ್ ಇರುತ್ತದೆಯಾ? ಎಂದರೆ ಸಾಕ್ಷಿಯು ಲಾಗ್ ರಿಜಿಸ್ಟರ್ ಬೇರೆ ಇರುವುದಿಲ್ಲ, ಆದರೆ ಕದ್ರಾದ ರಾಜೀವ ನಗರಕ್ಕೆ ವಿದ್ಯುತ್ ಪೂರೈಕೆ ಮಾಡುವ ಫೀಡರ್ ನಂಬರ್ 5 ಆಗಿದ್ದು, ಸದರಿ ಫೀಡರ್ ನ ಹೆಸರು ಕದ್ರಾ ರೂರಲ್ ಆಗಿರುತ್ತದೆ. ನಿಪಿ-51 ರಲ್ಲಿ ಫೀಡರ್ ನಂಬರ್ ನ್ನು ನಮೂದಿಸಿಲ್ಲ ಎಂದರೆ ಸರಿ. ಯಾವುದೇ ಏರಿಯಾದ ವಿದ್ಯುತ್ ಸಮಸ್ಯೆಗಳಿಗೆ ದೂರು ಬಂದರೆ, ದೂರು ದಾಖಲಿಸುವ ರಿಜಿಸ್ಟರ್ ನಲ್ಲಿ ನಮೂದು ಮಾಡುತ್ತೇವೆ. ನಾನು ನಮ್ಮ ಕಚೇರಿಯ ಯಾವುದೇ ದಾಖಲೆಗಳನ್ನು ಪರಿಶೀಲಿಸದ ಪೋಲಿಸರ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ